<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್. ಸಂಖ್ಯೆ.**472/2024** ಪಿ.ಡಬ್ಲೂ .1

**ದಿನಾಂಕಃ 04-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

<u>ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ</u>ಃ

1. ನಾನು ಪಾಲುಪಟ್ಟಿ ಆಧಾರದಲ್ಲಿ ದಾವಾ ಐಟಂ ನಂ.1 ಖಾತೆ ಬದಲಾವಣೆ ಆದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಸದರಿ ಪಾಲುಪಟ್ಟಿಯನ್ನು ಚಿಕ್ಕಣ್ಣ ಮರಣ ಹೊಂದಿದ ನಂತರ ಅವರ ಮಕ್ಕಳು ಮಾಡಿಕೊಂಡಿರುತ್ತಾರೆ. ಸದರಿ ಪಾಲುಪಟ್ಟಿಯ ದಿನಾಂಕ ಗೊತ್ತಿಲ್ಲ. ಚಿಕ್ಕಣ್ಣ, ರಾಮಪ್ಪ ಮತ್ತು ಕೃಷ್ಣಪ್ಪ ನವರು ವಿಭಾಗ ಮಾಡಿಕೊಂಡ ಬಗ್ಗೆ ನಾನು ಹಾಜರು ಮಾಡಿರುವ ದಾಖಲೆಗಳಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ಅವರು ಭಾಗ ಮಾಡಿಕೊಂಡಿದ್ದಾರೆ. ಮುನಿಬೀರಪ್ಪನ 6 ಜನ ಮಕ್ಕಳ ನಡುವೆ ಈವರೆಗೂ ಯಾವುದೇ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಅವರ ನಡುವೆ ಯಾವುದೇ ಭಾಗ ಆಗಿಲ್ಲದೇ ಇರುವುದರಿಂದ ಸದರಿ ವಿಭಾಗ ಯಾವ ದಿನಾಂಕದಂದು, ಯಾರ ಯಾರ ನಡುವೆ ಆಗಿರುತ್ತದೆ ಮತ್ತು ಯಾರು ಯಾರಿಗೆ ಯಾವ ಯಾವ ಆಸ್ತಿಗಳು ಹೋಗಿರುತ್ತವೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸುಳ್ಳು.

2. ನಿಪಿ.2 ರಲ್ಲಿರುವ IHC 472/1983-84 ರ ಮುಟೇಶನ್ ಯಾರ ಯಾರ ನಡುವೆ ಆಗಿರುತ್ತವೆ ಎಂದು ಗೊತ್ತಿಲ್ಲ. ನಿಪಿ-3 ರಲ್ಲಿ ಚಿಕ್ಕಣ್ಣನವರಿಗೆ ಕ್ರಯ ಎಂದು ನಮೂದು ಇದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿ ಚಿಕ್ಕಣ್ಣ ಮತ್ತು ಮುನಿಬೀರಪ್ಪ ರವರ ಒಟ್ಟು ಕುಟುಂಬದ ಆಸ್ತಿ ಎಂದರೆ ಹೌದು. ಮೇಲೆ ಹೇಳಿದ ಮುಟೇಶನ್ ಗೆ ಮುನಿಬೀರಪ್ಪ ರವರ ಎಲ್ಲಾ ವಾರಸ್ಸುದಾರರು ಸಮ್ಮತಿ ನೀಡಿರುವುದಿಲ್ಲ ಎಂದರೆ ಗೊತ್ತಿಲ್ಲ. ಅದೇ ರೀತಿ ದಾವಾ ಐಟಂ ನಂ.2 ರ ಖಾತೆ ಬದಲಾವಣೆಯಾಗುವಾಗ ಮುನಿಬೀರಪ್ಪ ರವರ ಎಲ್ಲಾ ವಾರಸ್ಸುದಾರರು ಸಮ್ಮತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಮ್ಮತಿ

ನೀಡಿದ್ದಾರೆ. ನಿಪಿ.17 ರಲ್ಲಿ ಮುನಿಬೀರಪ್ಪ ರವರ ಎಲ್ಲಾ ವಾರಸ್ಸುದಾರರು ಸಮ್ಮತಿ ನೀಡಿರುವ ಬಗ್ಗೆ ನಮೂದು ಇಲ್ಲ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ಅಲ್ಲದೇ ಇನ್ನು ಹಲವು ಒಟ್ಟು ಕುಟುಂಬದ ಆಸ್ತಿಗಳು ಇವೆ ಎಂದರೆ ಹೌದು. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಸದರಿ ಬೇರೆ ಆಸ್ತಿಗಳ ಬಗೆಗ ಬೇಡ ಎಂದು ನುಡಿಯುತ್ತಾರೆ. ಕೃಷ್ಣಪ್ಪನವರಿಗೆ ಬಂದ ಆಸ್ತಿಗಳ ಬಗ್ಗೆ ಮಾತ್ರ ಪರಿಹಾರ ಬೇಕು ಎಂದು ನುಡಿಯುತ್ತಾರೆ. ಈ ಹಿಂದೆ ನುಡಿದಿರುವ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಮುನಿಬೀರಪ್ಪ ರವರ 5 ಜನ ಗುಂಡು ಮಕ್ಕಳಿಗೆ ಎಲ್ಲಾ ಆಸ್ತಿಗಳಲ್ಲಿ ಸಮಾನಾಗಿ ಪಾಲು ಮಾಡಿಕೊಂಡಿದ್ದಾರೆ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ. ಸದರಿ ಆಸ್ತಿಗಳ ಪೈಕಿ ಕೃಷ್ಣಪ್ಪ ನವರಿಗೆ ಯಾವ ದಿನಾಂಕದಂದು ಆಸ್ತಿಗಳು ಬಂದಿರುತ್ತವೆ ಎಂದು ಗೊತ್ತಿಲ್ಲ. ಸುಮಾರು 40 ವರ್ಷ ಆಗಿರಬಹುದು.

3. ಮೇಲೆ ಹೇಳಿದ 14 ಆಸ್ತಿಗಳಿಗೆ ಮುನಿಬೀರಪ್ಪ ನವರ ಎಲ್ಲಾ ವಾರಸ್ಸುದಾರರಿಗೆ ಸಮಾನವಾದ ಹಕ್ಕು ಇದೆ ಎಂದರೆ ಹೌದು. ಮುನಿಬೀರಪ್ಪ ನವರ ಎಲ್ಲಾ ವಾರಸ್ಸುದಾರರನ್ನು  ಪಕ್ಷಗಾರನ್ನಾಗಿ ಮಾಡಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಅವರೆಲ್ಲರೂ ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಈಗಲೂ ಸಹ ಎಲ್ಲಾ ವಾರಸ್ಸುದಾರರು ಭಾಗ ಮಾಡಿಕೊಂಡಿಲ್ಲ  ಮತ್ತು ಎಲಲರಿಗೂ ಸಮಾನವಾದ ಹಕ್ಕು ಇದೆ ಎಂದರೆ ಸಾಕ್ಷಿ ಅವರೆಲ್ಲರೂ ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ 14 ಆಸ್ತಿಗಳ ಪೈಕಿ ಯಾರು ಯಾರಿಗೆ ಯಾವ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಚಿಕ್ಕಣ್ಣ ಮಗ ನಾರಾಯಣಸ್ವಾಮಿ, ನಾರಾಯಣಪ್ಪ ರವರಿಗೆ ಮಾರಾಟ ಮಾಡಿದ್ದು ಅದರ ಸರ್ವೇ ನಂಬರ್ ಗೊತ್ತಿಲ್ಲ. ಸದರಿ ಕ್ರಯದಾರರನ್ನು ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಆಸ್ತಿಯಲ್ಲಿ ಮಾತ್ರ ಭಾಗ

ಕೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಮತ್ತು ಪಕ್ಷಗಾರರನ್ನು ಸೇರಿಸದೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸುಳ್ಳು.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.